ಸಂಯುಕ್ತ ಕರ್ನಾಟಕ

ಶಿಕ್ಷಕರು, ಪದವೀಧರರ ಒಲವು ಲಿಂಬಿಕಾಯಿ ಪರ: ಗುರಿಕಾರ

ಹುಬ್ಬಳ್ಳಿ: ಪಶ್ಚಿಮ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮೋಹನ ಲಿಂಬಿಕಾಯಿ ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತವನ್ನು ಪದವೀಧರ ಮತದಾರರು ನೀಡಿ ವಿಧಾನ ಪರಿಷತ್‌ಗೆ ಆಯ್ಕೆ ಮಾಡಬೇಕು ಎಂದು ಕೆಪಿಸಿಸಿ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಗುರಿಕಾರ ಹೇಳಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಅವಧಿಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮೋಹನ ಲಿಂಬಿಕಾಯಿ ಅವರ ಬಗ್ಗೆ ಶಿಕ್ಷಕರು, ಪದವೀಧರರು ಒಲವು ತೋರಿದ್ದಾರೆ. ರಾಜ್ಯ ಸರ್ಕಾರದ ಪ್ರಗತಿಪರ ಕಾರ್ಯ ಹಾಗೂ ಅಭ್ಯರ್ಥಿಯ ಸಾಧನೆ ಗುರುತಿಸಿ ಅವರನ್ನು ಗೆಲ್ಲಿಸುವಲ್ಲಿ ಮುಂದಾಗಬೇಕು ಎಂದು ಹೇಳಿದರು. ಈಗಾಗಲೇ ಎಲ್ಲ ಕಡೆ ಪಕ್ಷದ ಮುಖಂಡರು ಪ್ರಚಾರ ಮಡೆಸುತ್ತಿದ್ದು, ಗೆಲುವಿನ ಮುನ್ಸೂಚನೆ ದೊರೆತಿದೆ. ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಯು ಜನಪ್ರಿಯತೆಗೆ ಕಾರಣವಾಗಿದೆ. ಪದವೀಧರರಿಗೆ ಕೌಶಲಾಭಿವೃದ್ಧಿ ಯೋಜನೆಯನ್ನು ಜಾರಿಗೆ ತಂದಿದೆ. ಖಾಲಿ ಹುದ್ದೆ ಭರ್ತಿ ಮಾಡಿಕೊಳ್ಳಲು ಸರ್ಕಾರ ಮುಂದಾಗಿದೆ. ಯುವನಿಧಿ ಯೋಜನೆಯಡಿ ಪದವೀಧರರಿಗೆ ಧನ ಪ್ರೋತ್ಸಾಹ ನೀಡಲಾಗುತ್ತಿದೆ ಎಂದರು.

ಕಾಂಗ್ರೆಸ್ ಯಾವಾಗಲೂ ಪದವೀಧರರ ಮತ್ತು ಶಿಕ್ಷಕರ ಪರವಿದ್ದು, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದೆ. ಈ ನಿಟ್ಟಿನಲ್ಲಿ ಒಪಿಎಸ್ ಮರು ಜಾರಿಗೆ ಸಮಿತಿ ರಚಿಸಿದ್ದು, ಸಮಿತಿ ತನ್ನ ವರದಿಯನ್ನು ಶೀಘ್ರದಲ್ಲಿ ನೀಡಲಿದ್ದು, ನಮ್ಮ ಸರ್ಕಾರ ಒಪಿಎಸ್ ಜಾರಿಗೆ ಬದ್ಧವಾಗಿದೆ. ರಾಜ್ಯದಾದ್ಯಂತ 56,452 ಉದ್ಯೋಗ ಭರ್ತಿಗೆ ಈಗಾಗಲೇ ಕ್ರಮ ವಹಿಸಿದೆ ಎಂದು ಹೇಳಿದರು. ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಟಿ.ಆರ್. ಶಿರೋಳ, ವಿ. ಎಸ್. ಚೌಕಿಮಠ, ಎಂ.ಎಂ. ಗಿರಣಿವಡ್ಡರ ಇದ್ದರು.



ಕುಂದಗೋಳ ಬ್ಲಾಕ್ ಕಾಂಗ್ರೆಸ್ ಸಮಿತಿ ಮತ್ತು ಛಬ್ಬಿ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಕಾಂಗ್ರೆಸ್ ಅಭ್ಯರ್ಥಿ ಮೋಹನ ಲಿಂಬಿಕಾಯಿ ಅವರ ಚುನಾವಣಾ ಪ್ರಚಾರ ಸಭೆಯನ್ನು ಕಾಂಗ್ರೆಸ್ ಮುಖಂಡರು ಉದ್ಘಾಟಿಸಿದರು.

ಮೋಹನ ಲಿಂಬಿಕಾಯಿ ಗೆಲುವಿಗೆ ಎಲ್ಲರೂ ಶ್ರಮಿಸಿ

ಕುಂದಗೋಳ: ಪಟ್ಟಣದ ಮರಾಠ ಭವನದಲ್ಲಿ ಸೋಮವಾರದಂದು ಕುಂದಗೋಳ ಬ್ಲಾಕ್ ಕಾಂಗ್ರೆಸ್ ಸಮಿತಿ ಮತ್ತು ಛಬ್ಬಿ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಪಶ್ಚಿಮ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮೋಹನ ಲಿಂಬಿಕಾಯಿ ಅವರ ಚುನಾವಣಾ ಪ್ರಚಾರ ಸಭೆ ನಡೆಯಿತು.

ಸಭೆಯಲ್ಲಿ ಕಾಂಗ್ರೆಸ್ ಹಿರಿಯ ಮುಖಂಡ ಡಾ. ಅರವಿಂದ ಕಟಗಿ ಮಾತನಾಡಿ, ಇದೀಗ ಪಶ್ಚಿಮ ಪದವೀಧರರ ವಿಧಾನ ಪರಿಷತ್ ಚುನಾವಣೆ ನಡೆಯುತ್ತಿದ್ದು, ಪಕ್ಷದ ಅಭ್ಯರ್ಥಿ ಮೋಹನ ಲಿಂಬಿಕಾಯಿ ಅವರ ಗೆಲುವಿಗೆ ಎಲ್ಲರೂ ಶ್ರಮಿಸಬೇಕು ಎಂದರು.

ಮಾಜಿ ಶಾಸಕ ಎಂ.ಎಸ್. ಅಕ್ಕಿ ಮಾತನಾಡಿ, ಮೋಹನ ಲಿಂಬಿಕಾಯಿ ಅವರು ಕಾನೂನು ತಜ್ಞರಾಗಿ, ಉಪನ್ಯಾಸಕರಾಗಿ ನಿರುದ್ಯೋಗಿಗಳ ಸಮಸ್ಯೆಗಳ ಬಗ್ಗೆ ಸಂಪೂರ್ಣ ಅರಿವು ಹೊಂದಿದ್ದಾರೆ. ಈ ನಿಟ್ಟಿನಲ್ಲಿ ಪದವೀಧರ ಮತದಾರರು ಪ್ರಥಮ ಪ್ರಾಶಸ್ತ್ಯದ ಮತವನ್ನು ಮೋಹನ ಲಿಂಬಿಕಾಯಿ ಅವರಿಗೆ ಚಲಾಯಿಸುವಂತೆ ಕರೆ ನೀಡಿದರು.

ಧಾರವಾಡ ಜಿಲ್ಲಾ ಗ್ರಾಮೀಣ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ಜುಟ್ಟಲ್ ಮಾತನಾಡಿ, ಪಶ್ಚಿಮ ಪದವೀಧರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ತಮ್ಮ ಮತ ನೀಡಿ ಜಯ ಸಾಧಿಸಲು ಸಹಕರಿಸಬೇಕು ಎಂದರು.

ಮಾಜಿ ಶಾಸಕಿ ಕುಸುಮಾವತಿ ಶಿವಳ್ಳಿ, ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಷಣ್ಮುಖ ಶಿವಳ್ಳಿ, ಶಿವಾನಂದ ಬೆಂತೂರ, ಚಂಬಣ್ಣ ಹಾಳದೋಟರ, ಬಸವರಾಜ ಶೇರಗಾವಿ, ಜಗದೀಶ ಉಪ್ಪಿನ, ಮಂಜುನಾಥ ಮಳ್ಳಪ್ಪನವರ, ಗೌಡಪ್ಪಗೌಡ ಪಾಟೀಲ, ಸಲೀಂ ಕ್ಯಾಲಕೊಂಡ, ಗಂಗಾಧರ ಪಾಣಿಗಟ್ಟಿ ಹಾಗೂ ಕಾರ್ಯಕರ್ತರು ಇದ್ದರು.

ಪದವೀಧರರ ಒಲವಿಗಾಗಿ ಕಸರತ್ತು

ಬಿಜೆಪಿ - ಕಾಂಗ್ರೆಸ್ ನೇರ ಸಮರ | ಸಮಬಲದ ಕಣ | ನಿರುದ್ಯೋಗದ ಬಿಸಿ | ಯಾರು ಹಿತವರು ಎಂಬ ಕುತೂಹಲ

■ ಬಿ. ಅರವಿಂದ

ಹುಬ್ಬಳ್ಳಿ: ಧಾರವಾಡ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡ ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಪದವೀಧರರ ಏಕೈಕ ಮತ್ತು ಸಮಾನ ಸಮಸ್ಯೆ ನಿರುದ್ಯೋಗ. ಕಣದಲ್ಲಿ ಹಾಲಿ ಸದಸ್ಯ ಬಿಜೆಪಿಯ ಎಸ್.ವಿ.ಸಂಕನೂರ ಮತ್ತು ಮಾಜಿ ಸದಸ್ಯ, ಕಾಂಗ್ರೆಸ್‌ನ ಮೋಹನ ಲಿಂಬಿಕಾಯಿ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ ! ಪ್ರಚಾರ ಮತ್ತು ಸ್ಪರ್ಧೆಯಲ್ಲಿ ಇಬ್ಬರೂ ಸಮಬಲ ಸಾಧಿಸಿದ್ದಾರೆ. ಈ ನಡುವೆ ಪಕ್ಷೇತರರು ಸೇರಿ ಒಟ್ಟು ಹದಿನಾಲ್ಕು ಅಭ್ಯರ್ಥಿಗಳೂ ಕಣದಲ್ಲಿದ್ದಾರೆ.


1984ರವರೆಗೆ ಕ್ಷೇತ್ರವನ್ನು ಜನಸಂಘ ಪ್ರತಿನಿಧಿಸಿತ್ತು (ವೈ. ಎಸ್.ಪಾಟೀಲ್). 1984ರಿಂದ 2008ರವರೆಗಿನ ನಾಲ್ಕು ಅವಧಿಗೆ ಕಾಂಗ್ರೆಸ್‌ನ ಭದ್ರಕೋಟೆಯಾಗಿ ಮಾರ್ಪಟ್ಟಿದ್ದ ಕ್ಷೇತ್ರವಿದು. ಮತದಾರರು ಪ್ರಭಾವಿ ಕಾಂಗ್ರೆಸ್ ನಾಯಕ ಎಚ್. ಕೆ.ಪಾಟೀಲ್ ಅವರನ್ನು ಸತತ ನಾಲ್ಕು ಅವಧಿಗೆ ಇಲ್ಲಿಂದ ಆರಿಸಿ ಕಳಿಸಿದ್ದರು. ಆದರೆ 2008ರಿಂದ ಈವರೆಗೆ ಪದವೀಧರ ಮತದಾರ ಬಿಜೆಪಿಯನ್ನೇ ಆಶೀರ್ವದಿಸುತ್ತಿದ್ದಾನೆ.

ಈ ಕ್ಷೇತ್ರದಲ್ಲಿ ದೊರೆಯುವ ನಾಲ್ಕನೇ ಗೆಲುವು, ತಾನು ಗೆಲ್ಲುವ ಮೊದಲ 24 ವರ್ಷ ಸೋಲಿಲ್ಲದೇ ವಿಜೃಂಭಿಸಿದ್ದ ಕಾಂಗ್ರೆಸ್ ಪಕ್ಷದ ಸಾಧನೆಯನ್ನು ಸರಿಗಟ್ಟಿದಂತೆ; ಜೊತೆಗೆ ಹಾಲಿ ಅಭ್ಯರ್ಥಿ ಎಸ್.ವಿ.ಸಂಕನೂರ ಹ್ಯಾಟ್ರಿಕ್ ಸಾಧನೆಗಾಗಿ ಬಿಜೆಪಿ ಕಣವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದೆ.

ಮೋಹನ ಲಿಂಬಿಕಾಯಿ ಮೊದಲು ಕಮಲ ಪಾಳಯದಲ್ಲಿದ್ದು 2008ರಲ್ಲಿ ಈ ಕ್ಷೇತ್ರವನ್ನು ಬಿಜೆಪಿಗೆ ಗೆದ್ದುಕೊಟ್ಟಿದ್ದರು ! ಬದಲಾದ ರಾಜಕೀಯ ಘಟ್ಟದಲ್ಲಿ ಈಗ ಕಾಂಗ್ರೆಸ್ ಪಕ್ಷದಲ್ಲಿರುವ ಲಿಂಬಿಕಾಯಿಯವರಿಗೆ ಕ್ಷೇತ್ರವನ್ನು ತಮ್ಮ ಮೂಲಕವೇ ಕಾಂಗ್ರೆಸ್‌ಗೆ ಗೆದ್ದು ಕೊಡಬೇಕು ಎನ್ನುವ ಛಲ. ಹೀಗಾಗಿ 'ಕೈ' ಪಾಳಯಕ್ಕೆ ಕೂಡ ಈ ಚುನಾವಣೆ ಪ್ರತಿಷ್ಠೆ.

ಒಂದರ್ಥದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲೂ ಬಂಡಾಯದ ಬಿಸಿ ಇಲ್ಲ. ಇನ್ನೊಂದು ಗಮನಾರ್ಹ ರಾಜಕೀಯ ಸಂಗತಿ ಎಂದರೆ, ಕಾಂಗ್ರೆಸ್‌ನ ಪ್ರಭಾವಿ ನಾಯಕ ಎಚ್.ಕೆ.ಪಾಟೀಲ್, ಸತತ ನಾಲ್ಕು ಬಾರಿ ಈ ಕ್ಷೇತ್ರದಿಂದ ಗೆದ್ದು ಕಾಂಗ್ರೆಸ್‌ನ ಎಲ್ಲ ಸರ್ಕಾರಗಳಲ್ಲಿ ವಿವಿಧ ಖಾತೆಗಳ ಸಚಿವರಾಗಿ ಖ್ಯಾತಿ ತಂದವರು. ಎಚ್‌ಕೆ ಹಾಲಿ ಸರ್ಕಾರದಲ್ಲಿ ಹುದ್ದೆಯಿಂದ ವಂಚಿತರಾಗಿದ್ದಾರೆ. ಪದವೀಧರ ಮತದಾರ ಇವೆರಡು ವಿದ್ಯಮಾನಗಳನ್ನು ಹೇಗೆ ಸ್ವೀಕರಿಸುತ್ತಾನೆ ಎಂಬುದೂ ಕೂಡ ಫಲಿತಾಂಶಕ್ಕೆ ನಿರ್ಣಾಯಕವಾಗಲಿದೆ. 'ಗೆಲುವು' ಈ ಸಾರೆ ತಮಗೆ ಸುಲಭವಲ್ಲ ಎಂಬುದು ಇಬ್ಬರೂ ಅಭ್ಯರ್ಥಿಗಳಿಗೆ ಗೊತ್ತಿರುವ ಸಂಗತಿ. ಈ ಆತಂಕದೊಂದಿಗೆ ಸಧ್ಯದ ಸ್ಥಿತಿಯಲ್ಲಿ ಇಬ್ಬರೂ ಸ್ಪರ್ಧೆಗೆ ಇಳಿದಿದ್ದಾರೆ.

ವಿಧಾನ ಪರಿಷತ್ ಪಶ್ಚಿಮ ಪದವೀಧರರ ಕ್ಷೇತ್ರ- ಚುನಾವಣೆ ಸಮೀಕ್ಷೆ



ಮೋಹನ ಲಿಂಬಿಕಾಯಿ



ಎಸ್.ವಿ ಸಂಕನೂರ

■ **ಅಲೆಗಳ ಮಾತು ಮುನ್ನೆಲೆಗೆ...!**

❖ ಇದು ಜನರಲ್ ಎಲೆಕ್ಷನ್ ಅಲ್ಲ; ಪದವೀಧರರು ಮತ ಹಾಕುವುದರಿಂದ ಮನೋಭೂಮಿಕೆಯೂ ವಿಭಿನ್ನವಾಗಿಯೇ ಇರುತ್ತದೆ. ಆದಾಗ್ಯೂ ಎರಡೂ ಪಕ್ಷಗಳು 'ಅಲೆ'ಗಳ ಲೆಕ್ಕಾಚಾರದಲ್ಲಿ ತೊಡಗಿರುವುದು ಈ ಬಾರಿಯ ವಿಶೇಷ.

ದೇಶದಲ್ಲಿ ಮೋದಿ ಅಲೆ ತಗ್ಗಿಲ್ಲ. ಜೊತೆಗೆ ರಾಜ್ಯ ಸರ್ಕಾರದ ಜನವಿರೋಧಿ, ಯುವ ವಿರೋಧಿ ನೀತಿಗಳು ಆಕ್ರೋಶ ಹುಟ್ಟಿಸಿವೆ. ಇದರೊಂದಿಗೆ ದೇಶ– ರಾಜ್ಯದಲ್ಲಿ ನಡೆಯುತ್ತಿರುವ ವಿದ್ಯಮಾನಗಳು; ದುರುದ್ದೇಶಪೂರ್ವಕವಾಗಿ ಯುವ ಶಕ್ತಿಯನ್ನು ಬಳಸಿಕೊಂಡು ಭಾರತದ ಸುಭದ್ರ ಸರ್ಕಾರವನ್ನು ಅಸ್ಥಿರಗೊಳಿಸುವ ಹುನ್ನಾರಗಳ ವಿರುದ್ಧ ಪದವೀಧರರು ಸಿಡಿದೇಳಲಿದ್ದಾರೆ ಎನ್ನುವ ಲೆಕ್ಕಾಚಾರ ಬಿಜೆಪಿಯದ್ದು.

ಕಾಂಗ್ರೆಸ್‌ಗೆ 'ಮೋದಿ ವಿರೋಧಿ ಅಲೆ'ಯ ಕಡೆ ನೋಟ. ವಾರ್ಷಿಕ ಲಕ್ಷಾಂತರ ಉದ್ಯೋಗ ಸೃಜನೆಯ ಮಾತನಾಡಿ ವಿಫಲವಾಗಿರುವ ಕೇಂದ್ರದ ವಿರುದ್ಧ ಜೆನ್ ಝೀಗಳು ಪ್ರತಿಭಟಿಸುತ್ತಿದ್ದಾರೆ; ಇತ್ತ ರಾಜ್ಯದಲ್ಲಿ ಯುವನಿಧಿ ಸೇರಿದಂತೆ ಜನಪರ ಗ್ಯಾರಂಟಿಗಳು ಹಾಗೂ 72 ಸಾವಿರ ಹುದ್ದೆಗಳ ಭರ್ತಿ ಪ್ರಕ್ರಿಯೆ ಪದವೀಧರರ ಮೆಚ್ಚುಗೆ ಗಳಿಸಿವೆ ಎಂಬುದು ಕಾಂಗ್ರೆಸ್ ತರ್ಕ.

■ **ಅಭ್ಯರ್ಥಿಗಳ ಲೆಕ್ಕಾಚಾರ...**

❖ ಖಾಲಿ ಹುದ್ದೆಗಳ ಭರ್ತಿಗಾಗಿ ತಾವು ತಂದ ಒತ್ತಡ; ಶಿಕ್ಷಕರು, ಅತಿಥಿ ಶಿಕ್ಷಕರು, ಡಿಪ್ಲೋಮಾ– ಐಟಿಐನಂತಹ ವಲಯಗಳ ಉದ್ಯೋಗಿಗಳ ಸೇವಾ ಭದ್ರತೆಗೆ ಮಾಡಿದ ಕೆಲಸ; ಐಟಿ–ಬಿಟಿಗಾಗಿ ಪಟ್ಟ ಹಾಗೂ ಪಡುತ್ತಿರುವ ಶ್ರಮ, ನಿರುದ್ಯೋಗಕ್ಕೆ ಮದ್ದು ಕಂಡುಕೊಳ್ಳಲು ಏರ್ಪಡಿಸಿ ಯಶಸ್ವಿಯಾಗಿರುವ ಉದ್ಯೋಗ ಮೇಳಗಳು; ಇವೆಲ್ಲವುಗಳಿಗಾಗಿ ವಿಧಾನ ಪರಿಷತ್ತಿನಲ್ಲಿ ಅಹರ್ನಿಶಿ ಧ್ವನಿ ಎತ್ತುತ್ತ ಸರ್ಕಾರದ ಮೇಲೆ ಒತ್ತಡ ತಂದಿರುವುದು ಪದವೀಧರರ ಒಲವು ಗಳಿಸಿವೆ. ಜೊತೆಗೆ ಮುಂದಿನ ದಿನಗಳಲ್ಲಿ ನಿರುದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿಗೆ; ಹಾಗೂ ಉದ್ಯಮ ಸ್ಥಾಪನೆಗೆ ಮಾಡಲಿರುವ ಕೆಲಸಗಳತ್ತ ಮತದಾರರ ನಿರೀಕ್ಷೆ ಇದೆ ಎಂಬುದು ಸಂಕನೂರ ವಿಶ್ವಾಸ.

ಸಂಕನೂರ ಎರಡು ಅವಧಿಗಳಲ್ಲಿ ಪದವೀಧರರ ಪರವಾದ ಕೆಲಸಗಳನ್ನು ಮಾಡಿಲ್ಲ. 2023ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಈ ವಲಯದ ಸಮಸ್ಯೆಗಳ ಪರಿಹಾರಕ್ಕೆ ಮುಂದಾಯಿತು. ಹೀಗಾಗಿ ಅನುದಾನಿತ ಶಿಕ್ಷಕರ ನೇಮಕ, ಅನುದಾನ ರಹಿತರಿಗೆ ಅನುದಾನ, ಓಪಿಎಸ್ (ಹಳೇ ಪಿಂಚಣಿಯೋಜನೆ)ಜಾರಿ,ಔದ್ಯಮಿಕತೆಯಿಂದ ನಿರುದ್ಯೋಗಕ್ಕೆ ಪರಿಹಾರ, ಕೌಶಲ್ಯ ಹಾಗೂ ಸ್ವಯಂ ಉದ್ಯೋಗಕ್ಕೆ ಒತ್ತು ನೀಡುವುದು ಇವೆಲ್ಲ ಭರವಸೆಗಳಿಂದಾಗಿ ಈ ಬಾರಿ ಪದವೀಧರರು ಕಾಂಗ್ರೆಸ್‌ಗೆ ಒಲಿಯಲಿದ್ದಾರೆ; ಶಿಕ್ಷಿತ ಮತದಾರರಿಗೆ ಹೊಸ ಮುಖ ಮತ್ತು ರಚನಾತ್ಮಕ ಬದಲಾವಣೆ ಬೇಕಾಗಿದೆ ಎಂಬುದು ಕಾಂಗ್ರೆಸ್ ಅಭ್ಯರ್ಥಿ ಮೋಹನ ಲಿಂಬಿಕಾಯಿ ಅವರ ಲೆಕ್ಕಾಚಾರ.

■ **ಜೆನ್ ಝೀ ಮನೋ ವ್ಯಾಪಾರ !**

ರಾಷ್ಟ್ರದಲ್ಲಿ ಯುವಜನ ಕೇಂದ್ರಿತವಾಗಿ ನಡೆಯುತ್ತಿರುವ ವಿದ್ಯಮಾನಗಳು, ಕಾರ್ಕ್ರೋಚ್ ದೃಷ್ಟಿಕೋನದ ಚಿಂತನೆಗಳು, ಜೆನ್ ಝೀಗಳ ಬೇಡಿಕೆಗಳು ಮುನ್ನೆಲೆಗೆ ಬಂದ ನಂತರ ಪದವೀಧರರು ಮಾತ್ರ ಮತದಾರರಾಗಿರುವ ಮೊದಲ ಚುನಾವಣೆಯಿದು. ಈ ಚುನಾವಣೆಯಲ್ಲಿ ಜೆನ್ ಝೀ ವಯೋಮಾನದವರೇ ನಿರ್ಣಾಯಕ ಮತದಾರರಲ್ಲ ನಿಜ. ಆದರೆ ಜೆನ್ ಝೀ ಎಂದರೆ ಯುವ ಸಮುದಾಯದ ಹಿತದೃಷ್ಟಿ ಎನ್ನುವ ವ್ಯಾಖ್ಯಾನದಿಂದಾಗಿ, ಪದವೀಧರರ ಮತದಾನವನ್ನು ನಾಡು ಕಣ್ಣು ಬಿಟ್ಟು ನೋಡುತ್ತಿದೆ.


ಪ್ರಮುಖ ಅಂಕಿ ಅಂಶಗಳು...

- ■ ಈ ಬಾರಿ ಮತದಾನ ದಿನಾಂಕ: ಅಕ್ಟೋಬರ್ 23.
- ■ ಫಲಿತಾಂಶ: ಅಕ್ಟೋಬರ್ 27.
- ■ ಚುನಾವಣಾ ವಿಧಾನ: ಪ್ರಾಶಸ್ತ್ಯದ ಮತದಾನ.
- ■ ಕಣದಲ್ಲಿರುವ ಅಭ್ಯರ್ಥಿಗಳ ಸಂಖ್ಯೆ: 14.
- ■ ಕ್ಷೇತ್ರ ವ್ಯಾಪ್ತಿ: ಧಾರವಾಡ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಗಳು.
- ■ ಮತದಾರರು: 97,398 ಸಾವಿರ.
- ■ ಅತೀ ಹೆಚ್ಚು ಮತಗಳಿರುವ ನಿರ್ಣಾಯಕ ಜಿಲ್ಲೆ: ಧಾರವಾಡ (30,902).
- ■ ಹಾಲಿ ಸದಸ್ಯ: ಪ್ರೊ. ಎಸ್.ವಿ.ಸಂಕನೂರ (ಬಿಜೆಪಿ; ಕಳೆದೆರಡು ಅವಧಿಯಿಂದ).
- ■ ಸಮೀಪ ಪ್ರತಿಸ್ಪರ್ಧಿ: ಮೋಹನ ಲಿಂಬಿಕಾಯಿ (ಕಾಂಗ್ರೆಸ್).
- ■ 2020ರ ಚುನಾವಣೆಯಲ್ಲಿ ಆಗಿದ್ದ ಮತದಾನ: ಶೇ 70.77.

ಕಾಂಗ್ರೆಸ್ ಅಭ್ಯರ್ಥಿ ಮೋಹನ್ ಲಿಂಬಿಕಾಯಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ | ಎಚ್.ಕೆ. ಪಾಟೀಲ ಹೇಳಿಕೆ

ಪಶ್ಚಿಮ ಪದವೀಧರ ಕ್ಷೇತ್ರ ಮರಳಿ ಪಡೆಯುತ್ತೇವೆ

ಹಾವೇರಿ: ಪಶ್ಚಿಮ ಪದವೀಧರ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮೋಹನ್ ಲಿಂಬಿಕಾಯಿ ಅವರನ್ನು ಗೆಲ್ಲಿಸುವ ಮೂಲಕ ಕಳೆದ ಮೂರು ಚುನಾವಣೆಗಳಿಂದ ಕೈ ತಪ್ಪಿರುವ ಕ್ಷೇತ್ರವನ್ನು ಈ ಬಾರಿ ಮರಳಿ ಪಡೆಯುವ ವಿಶ್ವಾಸವಿದೆ. ಪ್ರಜ್ಞಾವಂತ ಮತದಾರರು ಕಾಂಗ್ರೆಸ್ ಅಭ್ಯರ್ಥಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಬೇಕು ಎಂದು ಮಾಜಿ ಸಚಿವ, ಗದಗ ಶಾಸಕ ಎಚ್. ಕೆ. ಪಾಟೀಲ ಮನವಿ ಮಾಡಿದರು.



ಸಿದ್ದರಾಮಯ್ಯ ಅವರ ಚಾರಿತ್ರ್ಯಹರಣ ಖಂಡನೀಯ

ಸ್ಟಿಂಗ್ ಕಾರ್ಯಾಚರಣೆ ವಿಚಾರವಾಗಿ ಪ್ರತಿಕ್ರಿಯಿಸಿದ ಎಚ್.ಕೆ. ಪಾಟೀಲ, ಇತ್ತೀಚಿನ ದಿನಗಳಲ್ಲಿ ಸ್ಟಿಂಗ್ ಎಂಬ ಪದವೇ ಅಸಹ್ಯಕರ ಅರ್ಥ ಪಡೆದುಕೊಳ್ಳುತ್ತಿದೆ. ಇನ್ನೊಬ್ಬರ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಳ್ಳುವುದು, ಶೋಷಣೆ ಮಾಡುವುದು ಹಾಗೂ ನಾಯಕರ ವ್ಯಕ್ತಿತ್ವ ಮತ್ತು ಚಾರಿತ್ರ್ಯಕ್ಕೆ ಮಸಿ ಬಳಿಯುವ ಪ್ರಯತ್ನ ನಡೆಸುವುದು ವಿಷಾದನೀಯ.

ಮಾಜಿ ಸಿಎಂ ಸಿದ್ದರಾಮಯ್ಯ ಹಿರಿಯ ಮುತ್ಸದ್ದಿ ನಾಯಕರು. ಅವರ ಚಾರಿತ್ರ್ಯ ಹರಣ ಮಾಡುವ ಪ್ರಯತ್ನಗಳು ಯಶಸ್ವಿಯಾಗುವುದಿಲ್ಲ. ಸಿದ್ದರಾಮಯ್ಯ ಅವರ ಪರವಾಗಿ ಇಡೀ ಕಾಂಗ್ರೆಸ್ ಪಕ್ಷವಿದೆ. ತನಿಖೆಯಿಂದ ಸತ್ಯಾಸತ್ಯತೆ ಹೊರಬರಬೇಕು ಎಂಬುದು ಎಲ್ಲರ ಅಪೇಕ್ಷೆಯಾಗಿದೆ. ತನಿಖೆ ಪೂರ್ಣಗೊಳ್ಳುವವರೆಗೆ ಕಾಯಬೇಕು. ತನಿಖೆ ಶೀಘ್ರವಾಗಿ ಪೂರ್ಣಗೊಂಡು ಸತ್ಯಾಂಶ ಜನರ ಮುಂದೆ ಬರಬೇಕು ಎಂದು ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಶ್ಚಿಮ ಪದವೀಧರ ಮತಕ್ಷೇತ್ರ 2008ರವರೆಗೆ 24 ವರ್ಷಗಳ ಕಾಲ ಈ ಕ್ಷೇತ್ರ ಕಾಂಗ್ರೆಸ್‌ನ ಮಡಿಲಲ್ಲಿತ್ತು. ಆದರೆ, ಕಳೆದ ಮೂರು ಚುನಾವಣೆಗಳಲ್ಲಿ ಕ್ಷೇತ್ರ ಬಿಜೆಪಿಯ ಪಾಲಾಗಿದೆ. ಈ ಬಾರಿ ಮತ್ತೆ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸುವ ಮೂಲಕ ಕ್ಷೇತ್ರದ ಪ್ರಾತಿನಿಧ್ಯವನ್ನು ಮರಳಿ ಪಡೆಯಬೇಕಿದೆ ಎಂದರು.

ಕಾಂಗ್ರೆಸ್ ಅಭ್ಯರ್ಥಿ ಮೋಹನ್ ಲಿಂಬಿಕಾಯಿ ಅನುಭವಸ್ಥ ವಕೀಲರಾಗಿದ್ದು, ಕಾರ್ಮಿಕರ ಪರವಾಗಿ ಹೋರಾಟ ಮಾಡಿದ ಹಿನ್ನೆಲೆ ಹೊಂದಿದ್ದಾರೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ಪದವೀಧರರ ಪರವಾಗಿ ಗಟ್ಟಿಧ್ವನಿ ಎತ್ತುವ ಸಾಮರ್ಥ್ಯ ಅವರಲ್ಲಿದೆ ಎಂದರು.

ಪಶ್ಚಿಮ ಪದವೀಧರ ಕ್ಷೇತ್ರದ ವ್ಯಾಪ್ತಿಯ ನಾಲ್ಕು ಜಿಲ್ಲೆಗಳಲ್ಲಿ ಕಾಂಗ್ರೆಸ್‌ನ 18 ಶಾಸಕರಿದ್ದು, ರಾಜ್ಯದಲ್ಲಿಯೂ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ. ನಿರುದ್ಯೋಗ ಸಮಸ್ಯೆ ಕಡಿಮೆ ಮಾಡಲು ಸರ್ಕಾರಿ ಹುದ್ದೆಗಳ ನೇಮಕಾತಿಗೆ ಸರ್ಕಾರ ಮುತುವರ್ಜಿ ವಹಿಸುತ್ತಿದೆ. ಕಾಂಗ್ರೆಸ್ ಅಭ್ಯರ್ಥಿ ಗೆಲುವು ಸಾಧಿಸಿದರೆ ಪಕ್ಷಕ್ಕೆ, ಸರ್ಕಾರಕ್ಕೆ ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಮತ್ತಷ್ಟು ಬಲ ದೊರೆಯಲಿದೆ. ಮುಖ್ಯಮಂತ್ರಿ ಆದ ಬಳಿಕ ಡಿ.ಕೆ. ಶಿವಕುಮಾರ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿರುವುದರಿಂದ ಈ ಗೆಲುವು ಮಹತ್ವದ್ದಾಗಿದೆ ಎಂದರು.

ಯುವಜನರಲ್ಲಿ ವಿಶೇಷವಾಗಿ ಜೆನ್‌ಜಿಗಳಲ್ಲಿ ಬಿಜೆಪಿ ಆಡಳಿತದ ಬಗ್ಗೆ ಅಸಮಾಧಾನ ಮೂಡಿದೆ. ದೇಶದಲ್ಲಿ ನಿರೀಕ್ಷಿತ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂಬ ಭಾವನೆ ಯುವಜನರಲ್ಲಿದೆ. ಪ್ರಜಾಪ್ರಭುತ್ವ ಉಳಿಸಿ ಬೆಳೆಸುವ ಆಶಯ ಹೊಂದಿರುವ ಯುವಜನರು ಕಾಂಗ್ರೆಸ್‌ನತ್ತ ಒಲವು ತೋರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲುವು ಸಾಧಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಚಿವ ರುದ್ರಪ್ಪ ಲಮಾಣಿ, ಶಾಸಕ ಬಸವರಾಜ ಶಿವಣ್ಣನವರ, ಹೆಸ್ಕಾಂ ಅಧ್ಯಕ್ಷ ಸಯ್ಯದ್ ಅಜ್ಜಂಪೀರ್ ಖಾದ್ರಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ, ಕೊಟ್ರೇಶಪ್ಪ ಬಸೇಗಣ್ಣಿ, ಎಂ.ಎಂ. ಮೈದೂರ, ಪ್ರಭುಗೌಡ ಬಿಷ್ಟನಗೌಡ್ರ, ಎಂ.ಎಂ. ಹಿರೇಮಠ, ರಾಜು ಕುನ್ನೂರ, ಗುಡ್ಡನಗೌಡ ಅಂದಾನಿಗೌಡ್ರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪದವೀಧರರಿಗಾಗಿ ನಡೆಸಿದ ಹೋರಾಟ ಕೈ ಹಿಡಿಯಲಿದೆ



ಧಾರವಾಡ: ಉದ್ಯೋಗಾಕಾಂಕ್ಷಿ ಪದವೀಧರರಿಗಾಗಿ ನಡೆಸಿದ ಹೋರಾಟ ನನ್ನ ಕೈ ಹಿಡಿಯಲಿದ್ದು, ವಿಧಾನ ಪರಿಷತ್ ಚುನಾವಣೆಯಲ್ಲಿ ನಾನು ಗೆಲುವು ಸಾಧಿಸುವುದು ನಿಶ್ಚಿತ ಎಂದು ವಿಧಾನ ಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಕಾಂತಕುಮಾರ್ ಆರ್. ಹೇಳಿದರು.

ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಸಂಘದ ವತಿಯಿಂದ ಹೋರಾಟ ನಡೆಸಿದ್ದರಿಂದ ರಾಜ್ಯ ಸರಕಾರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುತ್ತಿದೆ. ವಿಧಾನ ಪರಿಷತ್‌ನಲ್ಲಿಯೂ ಪದವೀಧರರು, ಶಿಕ್ಷಕರ ಬೇಡಿಕೆಗಳ ಈಡೇರಿಕೆಗಾಗಿ ಅವರ ಧ್ವನಿಯಾಗಲು ಚುನಾವಣಾ ಕಣಕ್ಕಿಳಿದಿದ್ದೇನೆ. ಕೆಪಿಎಸ್‌ಸಿ ವಿರುದ್ಧ ನಡೆಸಿದ ಹೋರಾಟದ ಕಾರಣದಿಂದಾಗಿ ಭ್ರಷ್ಟಾಚಾರ ನಡೆಸಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಈವರೆಗೆ ಕ್ಷೇತ್ರ ಪ್ರತಿನಿಧಿಸಿದವರು ಪದವೀಧರರಿಗೆ ಸ್ಪಂದನೆ ನೀಡಿಲ್ಲ ಎಂದರು.

ನನ್ನ ಅಭಿಮಾನಿಗಳು ಹಾಗೂ ಹಿತೈಷಿಗಳು ಕ್ಷೇತ್ರ ವ್ಯಾಪ್ತಿಯ 4 ಜಿಲ್ಲೆಗಳಲ್ಲಿ ಸುಮಾರು 28,000 ಮತದಾರರ ನೋಂದಣಿ ಮಾಡಿಸಿದ್ದಾರೆ. ಪದವೀಧರರೇ ಸ್ವಯಂ ಪ್ರೇರಣೆಯಿಂದ ನನ್ನ ಪರವಾಗಿ ಮತಯಾಚನೆ ಮಾಡುತ್ತಿದ್ದಾರೆ. ನಾನು ಯಾವುದೇ ರಾಜಕೀಯ ಪಕ್ಷದ ಅಭ್ಯರ್ಥಿಗೆ ಅನುಕೂಲ ಮಾಡಿಕೊಡಲು ಸ್ಪರ್ಧೆ ಮಾಡುತ್ತಿಲ್ಲ, ಗೆಲ್ಲುವ ಉದ್ದೇಶಕ್ಕಾಗಿ ಸ್ಪರ್ಧೆ ಮಾಡುತ್ತಿದ್ದೇನೆ ಎಂದು ನುಡಿದರು.

ಸರಕಾರ ಅತಿಥಿ ಶಿಕ್ಷಕರಿಗೆ ಗೌರವಯುತವಾದ ವೇತನ ನೀಡುತ್ತಿಲ್ಲ. ಕಾರಾಗೃಹದಲ್ಲಿರುವ ಕೈದಿಗಳಿಗೆ ಪ್ರತಿ ತಿಂಗಳು ಕನಿಷ್ಠ 16,500 ರೂ. ವೇತನ ನೀಡಲಾಗುತ್ತದೆ. ಆದರೆ ಅದಕ್ಕಿಂತ ಕಡಿಮೆ ವೇತನ ನೀಡಿ ಶಿಕ್ಷಕರನ್ನು ಜೀತದಾಳುಗಳಂತೆ ದುಡಿಸಿಕೊಳ್ಳಲಾಗುತ್ತಿದೆ. ಪದವೀಧರರ ಬೇಡಿಕೆಗಳ ಈಡೇರಿಕೆಗಾಗಿ ನನ್ನ ಹೋರಾಟ ಮುಂದುವರೆಯಲಿದೆ. ಒಂದು ವೇಳೆ ನಾನು ಚುನಾವಣೆಯಲ್ಲಿ ಸೋತರೆ ಅದು ನನ್ನ ಸೋಲಲ್ಲ, ಅದು ಮತದಾರರ ಸೋಲು ಎಂದೇ ಭಾವಿಸಿದ್ದೇನೆ. ಜನರು ಬದಲಾವಣೆ ಬಯಸಿದ್ದು, ಹೋರಾಟದ ಮೂಲಕ ಗುರುತಿಸಿಕೊಂಡ ನನಗೆ ಮೊದಲ ಪ್ರಾಶಸ್ತ್ಯದ ಮತ ನೀಡುವ ವಿಶ್ವಾಸವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಜಯಕುಮಾರ್, ರಾಜಶೇಖರ ಅಸುಂಡಿ, ಟಿ.ಎಚ್. ತಳವಾರ, ಯಶ್‌ಗೌಡ ಇದ್ದರು.



ಲಿಂಬಿಕಾಯಿ ಪರ ಮತಯಾಚನೆ


ಕುಂದಗೋಳ: ಪಶ್ಚಿಮ ಪದವೀಧರ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮೋಹನ ಲಿಂಬಿಕಾಯಿ ಪರ ಕಾಂಗ್ರೆಸ್ ಪಕ್ಷದ ಮುಖಂಡರು ತಾಲೂಕಿನ ಕಳಸ, ಸಂಕ್ಲಿಪುರ, ಯರೇಬೂದಿಹಾಳ, ಸಂಶಿ, ಗುಡಿಗೇರಿ, ಗೌಡಗೇರಿ ಗ್ರಾಮಗಳಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು ಮತಯಾಚನೆ ಮಾಡಿದರು.

ಮಾಜಿ ಶಾಸಕ ಮಲ್ಲಿಕಾರ್ಜುನ ಅಕ್ಕಿ, ಮುಖಂಡರಾದ ಡಾ. ಅರವಿಂದ ಕಟಗಿ, ಷಣ್ಮುಖ ಶಿವಳ್ಳಿ, ಜಗದೀಶ ಉಪ್ಪಿನ, ಚಂಬಣ್ಣ ಹಾಲದೋಟರ, ಎನ್. ಎಫ್. ನದಾಫ್, ಹಜರತ್ ಅಲಿ ಜೋಡಮನಿ, ಬಸವರಾಜ ನಾಯ್ಕರ, ಮಲ್ಲೇಶ ಬೆಳವಾಡಿ, ಗುರು ಚಲವಾದಿ ಇದ್ದರು.

ಅನುಭವಿ, ಸಮರ್ಥ ಅಭ್ಯರ್ಥಿ ಸಂಕನೂರ : ಮುನೇನಕೊಪ್ಪ

ನವಲಗುಂದ: ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಎಸ್.ವಿ. ಸಂಕನೂರ ಅವರು ಅನುಭವಿ ಹಾಗೂ ಸಮರ್ಥ ಅಭ್ಯರ್ಥಿಯಾಗಿದ್ದು, ಪದವೀಧರರ ಆಶೋತ್ತರಗಳಿಗೆ ಸ್ಪಂದಿಸುವ ನಾಯಕನಾಗಿದ್ದಾರೆ. ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಪದವೀಧರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮತದಾರರು ಸಂಕನೂರ ಅವರಿಗೆ ಬೆಂಬಲ ನೀಡಿ, ಮೂರನೇ ಬಾರಿಗೆ ಗೆಲುವು ತಂದುಕೊಡಬೇಕು ಎಂದು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಮತದಾರರಲ್ಲಿ ಮನವಿ ಮಾಡಿದರು.

ಪಟ್ಟಣದ ಸರ್ಕಾರಿ ಕಾಲೇಜ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಎಸ್.ವಿ. ಸಂಕನೂರ ಅವರು ಈಗಾಗಲೇ ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದು, ತಮ್ಮ ಅನುಭವದ ಮೂಲಕ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ ಎಂದರು. ಸಭೆಯಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ವಿ. ಸಂಕನೂರ, ನಿಂಗಪ್ಪ ಸುತಗಟ್ಟಿ, ಗಂಗಣ್ಣ ಮನಮಿ, ಸಾಯಿಬಾಬಾ ಆನೆಗುಂದಿ, ಸುಭಾಷ ಪಾಟೀಲ, ಪ್ರಕಾಶ ಅಂಗಡಿ, ಶ್ರೀಶೈಲ ಮೂಲಿಮನಿ, ಷಣ್ಮುಖ ಗುರಿಕಾರ, ಅಣ್ಣಪ್ಪ ಬಾಗಿ, ರಾಯನಗೌಡ ಪಾಟೀಲ, ಐ.ಡಿ. ಪ್ರಭು, ಮಹಾಂತೇಶ ಕಲಾಲ, ಈರಣ್ಣ ಚಾವಡಿ, ಮಲ್ಲಿಕಾರ್ಜುನಗೌಡ ಸಂಗನಗೌಡ್ರ, ದೇವರಾಜ ಕರಿಯಪ್ಪನವರ, ಬಸವರಾಜ ಕಾತರಕಿ ಇದ್ದರು.



ನವಲಗುಂದ ಪಟ್ಟಣದ ಸರ್ಕಾರಿ ಕಾಲೇಜಿನಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ವಿ. ಸಂಕನೂರ ಪರ ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಮತ ಯಾಚಿಸಿದರು.

ಉತ್ತರ ಕರ್ನಾಟಕದ ನಂ. 1 ಬೋರವೆಲ್ ಕಂಪನಿ
ಶ್ರೀ ವೆಂಕಟೇಶ್ವರ ಬೋರವೆಲ್ಸ್
SRI VENKATESHWARA BOREWELLS
SINCE 1983
4½, 6", 6½ & 7" BOREWELLS
SUPER FAST RIGS
2000
99029 27516
94480 51338
HEAD OFFICE: U-53, LAXMI COMPLEX, NEELIGIN ROAD, HUBBALLI - 580 029.

SK CLASSIFIED
ಹುಬ್ಬಳ್ಳಿ ಆವೃತ್ತಿ ದರ

ಅಳತೆ	ದರ	ಕೊಡುಗೆ
4x5	790/-	3+1 - 5+2
4x10	1260/-	3+1 - 5+2

ಲೈಂಗಿಕ ನಿಶ್ಯಕ್ತಿಗೆ ಸಂಪರ್ಕಿಸಿ
ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯ ತಾರುಣ್ಯ ನಾಶ, ಶೀಘ್ರಸ್ಖಲನ, ಗಡಸುತನ, ಲಿಂಗ ಚಿಕ್ಕವಿರುವದು, ಲಿಂಗ ದೌರ್ಬಲ್ಯ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ 36 ವರ್ಷ ಅನುಭವ. ಎಲ್ಲ ತರಹದ ಪುರುಷರ ಲೈಂಗಿಕ ಸಮಸ್ಯೆಗಳಿಗೆ ಸಮುಕ್ತಮ ಭೇಟಿಯಾಗಿರಿ
ಡಾ.ಕಟಾಡಿ. ನವಯೌವನ ಡಿಸ್ಪೆನ್ಸರಿ (Govt.Regd. No.8043)
ಚೆನ್ನಮ್ಮ ಸರ್ಕಲ್, ದಾಜೀಬಾನ ಪೇಟ ರಸ್ತೆ, ಸಿಟಿ ಕ್ಲಿನಿಕ್ ದವಾಖಾನೆ ಎದುರಿಗೆ, ಹುಬ್ಬಳ್ಳಿ.
M:9035252494

ದಮ್ಮಿನ (ಅಸ್ತಮಾ) ರೋಗಿಗಳಿಗೆ ಸುವರ್ಣಾವಕಾಶ
ಪ್ರತಿ ವರ್ಷದಂತೆ ಕೋಜಾಗಿರಿ-ಶೀಗೆಹುಣ್ಣಿಮೆ ದಿ. 25.10.2026 ರಂದು ಹಳೆ ನೆಗಡಿ, ಕೆಮ್ಮು ಮತ್ತು ದಮ್ಮು (ಅಸ್ತಮಾ) ಇದರ ಮೇಲೆ ಆಯುರ್ವೇದಿಕ ಔಷಧಿಯನ್ನು ಕೊಡಲಾಗುವುದು. ಮುಂಚಿತವಾಗಿ ಹೆಸರು ನೊಂದಾಯಿಸುವುದು ಆವಶ್ಯಕ.
ಸಂಪರ್ಕಿಸಿ
ಡಾ|| ಸೌ. ಸ್ವಾತಿ ಕೇತಕರ
ದೇಶಪಾಂಡೆ ಗಲ್ಲಿ, ಬೆಳಗಾವಿ.
94482 63223
99023 82968

ಓದುಗರ ಗಮನಕ್ಕೆ: ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. –ಜಾಹೀರಾತು ವ್ಯವಸ್ಥಾಪಕರು

NEFT (ನೆಫ್ಟ್) ಮೂಲಕ ಬ್ಯಾಂಕ್ ಖಾತೆಗೆ ಹಣ ಸಂದಾಯಿಸುವ ವಿವರ
1) A/c No. (ಖಾತೆ ಸಂ.) 0832000101347401
2) IFSC CODE (ಐಎಫ್‌ಎಸ್‌ಸಿ ಸಂಕೇತ): KARB 0000083
3) ಹಣ ಸಂದಾಯದ ಹೆಸರು: LOKA SHIKSHANA TRUST
4) ಬ್ಯಾಂಕ್ ಹೆಸರು : KARNATAKA BANK
BRANCH: KASTURBA ROAD, BANGALORE-560001.
5) ಪ್ಯಾನ್ ಸಂಖ್ಯೆ: AAATL 1086H
6) ವಿ.ಸೂ: ತಾವು ಜಮೆ ಮಾಡಿದ ಪೇ ಇನ್ ಸ್ಲಿಪ್ ಜೊತೆಗೆ ಪ್ರಕಟಿಸಬೇಕಾದ ಜಾಹೀರಾತನ್ನು ಸಂ.ಕ. ಕಚೇರಿಗೆ ಕಳುಹಿಸಬೇಕು.
* ಡಿ.ಡಿ. ಕಳಿಸುವುದಿದ್ದಲ್ಲಿ ಸಂಯುಕ್ತ ಕರ್ನಾಟಕ ಹೆಸರಿನಲ್ಲಿ ಕಳುಹಿಸಬೇಕು.

Edition	Bangalore	Gulburga	Davanagere	Mangalore	All Edition
*Disply Classified	Rs. 40-00	Rs.15-00	Rs. 15-00	Rs. 15-00	Rs.80-00

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು..... ಅಗಾಧ ಫಲಿತಾಂಶ! ಜಾಹೀರಾತಿಗಾಗಿ ಸಂಪರ್ಕಿಸಿರಿ:
ಸಂಪರ್ಕಿಸಿರಿ: ಮೊ: 9900049656
ಇ-ಮೇಲ್: skhubli@gmail.com

ಸಾರ್ವಜನಿಕ ನೋಟಿಸು

ನಮ್ಮ ಪಕ್ಷಗಾರರಾದ, ಶ್ರೀ ವಿನಾಯಕ ತಂದೆ ರಾಘವೇಂದ್ರ ಹಬ್ಬು, ಸಾ: ವಿಜಯನಗರ, ಹುಬ್ಬಳ್ಳಿ, ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ತಿಳುವಳಿಕೆ ನೋಟೀಸು ಏನೆಂದರೆ:-

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕ ಸಬ್ ರಜಿಸ್ಟ್ರಾರ ಹದ್ದಿಯ ಪಾಳೆ ಗ್ರಾಮದ ಬೆಳಗಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ವಾಸದಿ ವಿಹಾರ 2ನೇ ಹಂತ, ಇದರ ವಿವರ ಸರ್ವೆ ನಂ. 40 ಹಿಸ್ಸಾ 1ಸಿ+2ಎ+2ಬಿ+2ಸಿ, ಇವುಗಳಲ್ಲಿರುವ ಪ್ಲಾಟ ನಂ. 2 ಮತ್ತು ಪ್ಲಾಟ ನಂ. 3 ಪ್ರತ್ಯೇಕ ವಿಸ್ತೀರ್ಣ 1 ಗುಂಟೆ 01 ಆಣೆ ಇರುವ ಪ್ಲಾಟ ನಂ. 2ನೇದ್ದರ ಮಾಲೀಕರಾದ, ಶ್ರೀಮತಿ. ಶಬಾನಾ ಬ ಬಡಿಗೇರ, ಮತ್ತು ಪ್ಲಾಟ ನಂ. 3 ರ ಮಾಲೀಕರಾದ, ಶ್ರೀ ಮೊಹಮ್ಮದ ಅಲಿ ತಂದೆ ಮುಗಟಸಾಬ ಪಟೇಲ ಇವರಿಂದ ನನ್ನ ಪಕ್ಷಗಾರರು ಖರೀದಿಗೆ ಹಿಡಿಯವರು ಇರುತ್ತಾರೆ. ಸದರಿಯವರ ಸಂಗಡ ನಮ್ಮ ಪಕ್ಷಗಾರರು ಸದರ ಪ್ಲಾಟಿನ ಖರೀದಿ ಸಂಚಗಾರ ವ್ಯವಹಾರ ಮಾಡಿಕೊಂಡಿದ್ದು ಇರುತ್ತದೆ.

ಆದ್ದರಿಂದ ಸದರೀ ಮೇಲ್ಕಂಡ ಎರಡು ಪ್ಲಾಟಿನ ಕುರಿತು ಯಾವದೇ ತಂಟೆ, ತಕರಾರು ವ ಮಾಲ್ಕಿ ಹಕ್ಕು ಹಿತಾಸಕ್ತಿ ಅಥವಾ ಬ್ಯಾಂಕಿನ ಭೋಜಾ ಹಾಗೂ ಖಾಸಗಿ ಲೇವಾದೇವಿ, ಮೃತ್ಯುಲೇಖ ವಗೈರೆ ಇದ್ದಲ್ಲಿ ಅಂತಹವರು ಈ ನೋಟೀಸು ಪ್ರಕಟಿಸಿದ 7 (ಏಳು) ದಿವಸದ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ತಮ್ಮ ಲಿಖಿತ ತಕರಾರುಗಳನ್ನು ಪುರಾವೆಗಳೊಂದಿಗೆ ಸಲ್ಲಿಸಬೇಕು. ಒಂದು ವೇಳೆ ಅವಧಿಯೊಳಗಾಗಿ ತಕರಾರುಗಳು ಬಾರದೆ ಇದ್ದಲ್ಲಿ ಸದರೀ ಪ್ಲಾಟುಗಳನ್ನು ನಮ್ಮ ಪಕ್ಷಗಾರರು ಖರೀದಿ ದಸ್ತ ನೋಂದ ಮಾಡಿಕೊಳ್ಳುವರು ಇರುತ್ತಾರೆ. ಅನಂತರ ಬಂದ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲಾ, ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಸ್ಥಳ: ಹುಬ್ಬಳ್ಳಿ | ದಿನಾಂಕ: 19-10-2026
ಸಹಿ/- ಎಮ್. ಪಿ. ಪೂಜಾರ, ವಕೀಲರು,
ಹೊಸ ನ್ಯಾಯಾಲಯದ ಸಂಕೀರ್ಣ, ವಿದ್ಯಾನಗರ,
ಹುಬ್ಬಳ್ಳಿ-580021. ಮೊ: 7204018963, 8317313835

CHANGE OF NAME

I, Sejal Komalapur, D/o Vivekanand, (old name: Sejal Komalapur), residing at M.12, RK Orchard Apartments, near Rambapuri Kalyan Mantap, Vidyanagar, Hubballi, have changed my name to **SEJAL VIVEKANAND KOMALAPUR (new name)** for all purposes, vide affidavit sworn before Notary Mantur A V, dated 09-10-2026, Hubballi.

बैंक ऑफ़ बड़ौदा
Bank of Baroda
ಹುಬ್ಬಳ್ಳಿ ಮುಖ್ಯ ಶಾಖೆ, 84, ವಿನಾಯಕ ಸದನ, ಪವಾರ ಕಾಂಪ್ಲೆಕ್ಸ್, ಪಿ ಬಿ ರಸ್ತೆ, ಹೊಸ ಕೆ.ಎಸ್.ಆರ್.ಟಿ.ಸಿ. ಡಿಪೋ ಎದುರು, ಹೊಸೂರ, ಹುಬ್ಬಳ್ಳಿ.
ಇ–ಹರಾಜು ಮಾರಾಟ ಸೂಚನೆ

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು.
ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ/ ಅಡಮಾನದಾರನಿ(ರಿ)ಗೆ ಹಾಗೂ ಜಾಮೀನುದಾರನಿ(ರಿ)ಗೆ ನಿರ್ದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳು ಭದ್ರತಾ ಸಾಲಿಗರಿಗೆ (ಸೆಕ್ಯೂರ್ಡ್ ಕ್ರೆಡಿಟರ್) ರಿಗೆ ಅಡಮಾನವಾಗಿದ್ದು/ಅವರ ಛಾರ್ಜಿನಲ್ಲಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ್ ಕ್ರೆಡಿಟರ್ ರವರಾದ, ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಯ(ಗಳ) ಬಾಕಿ ವಸೂಲಾತಿಗಾಗಿ ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ" ಅವುಗಳನ್ನು ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರನ(ರ)/ಅಡಮಾನದಾರನ(ರ)/ಜಾಮೀನುದಾರನ(ರ) ಭದ್ರತಾ ಆಸ್ತಿ(ಗಳು)/ಬಾಕಿ/ ಮೀಸಲು ಬೆಲೆ / ಇ-ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳು ಕೆಳಕಂಡಂತಿವೆ :-

ಕ್ರ ಸಂ	ಸಾಲಗಾರರ ಮತ್ತು ಅಡಮಾನವಾಗಿರಿಸಿದ ಆಸ್ತಿಯ ಮಾಲಕರು ಹೆಸರು ಮತ್ತು ವಿಳಾಸ	ಆಸ್ತಿಯ ವಿವರ:	ಒಟ್ಟು ಬಾಕಿ	ಇ-ಹರಾಜಿ ದಿನಾಂಕ ಮತ್ತು ಸಮಯ:	ಆಸ್ತಿಯ ಮೀಸಲು ಬೆಲೆ ಇಎಂಡಿ ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ (ರೂ)	ಆಸ್ತಿಯ ಸ್ವರೂಪ (ರಚನಾತ್ಮಕ/ಭೌತಿಕ)	ಆಸ್ತಿ ಪರಿಶಿಲನೆ ದಿನಾಂಕ ಮತ್ತು ಸಮಯ
1	ಶ್ರೀ ಹಬೀಬಸಾಬ ಸೈದುಸಾಬ್ ನದಾಫ್ ಪ್ಲಾಟ ನಂ.31, ಆರ್ ಎಸ್ ನಂ.4, ನದಾಫ್ ಓಣಿ, ಬಿಲಾಲ ಮಸಿದಿ ಹತ್ತಿರ, ಮಿಶ್ರೀಕೋಟಿ, ಕಲಘಟಗಿ, ಧಾರವಾಡ–581 204 ಶ್ರೀಮತಿ ಹಸೀನಾಬಿ ನದಾಫ್ ಪ್ಲಾಟ ನಂ.31, ಆರ್ ಎಸ್ ನಂ.4, ನದಾಫ್ ಓಣಿ, ಬಿಲಾಲ ಮಸಿದಿ ಹತ್ತಿರ, ಮಿಶ್ರೀಕೋಟಿ, ಕಲಘಟಗಿ, ಧಾರವಾಡ–581 204	ಕರ್ನಾಟಕ, ಜಿ॥ಧಾರವಾಡ–581 204, ತಾ॥ಕಲಘಟಗಿ, ಮಿಶ್ರೀಕೋಟಿ ಗ್ರಾಮದಲ್ಲಿರುವ ವಸತಿ ಆಸ್ತಿ ಪ್ಲಾಟ ನಂ.31, ಆರ್.ಎಸ್. ನಂ.4, ವಿಸ್ತೀರ್ಣ 01ಗುಂಟೆ–00 ಆಣಾ ಇದರ ಚಕಬಂದಿ: ಪೂರ್ವ:ಪ್ಲಾಟ್ ನಂ.32, ಪಶ್ಚಿಮ:10 ಅಡಿ ರಸ್ತೆ, ಉತ್ತರ:ಪ್ಲಾಟ್ ನಂ.27, ದಕ್ಷಿಣ:ಪ್ಲಾಟ್‌ನ ಉಳಿದ ಭಾಗ	ರೂ.19,66,761.00 + ಮೊತ್ತದ ಮೇಲಿನ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು	20.11.2026 ಬೆಳಿಗ್ಗೆ 10.30 ರಿಂದ ಸಂಜೆ 5.00 ಗಂಟೆಯವರೆಗೆ	ಮೀಸಲು ಬೆಲೆ ರೂ.17,70,300 ಇಎಂಡಿ: ರೂ.1,77,030 ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ ರೂ.25,000/-	ಭೌತಿಕ ಸ್ವಾಧೀನ	19.11.2026 ರಿಂದ 19.11.2026 ಬೆಳಿಗ್ಗೆ 10.30 ರಿಂದ ಸಂಜೆ 5.00 ಗಂಟೆಯವರೆಗೆ ರಜಾದಿನಗಳನ್ನು ಹೊರತುಪಡಿಸಿ

ಮಾರಾಟದ ವಿವರವಾದ ಷರತ್ತು ನಿಬಂಧನೆಗಳಿಗಾಗಿ https://baankent.com ಹಾಗೂ https://www.bankofbaroda.in/e-auction.htm ನಲ್ಲಿನ ಲಿಂಕ್ ಅನ್ನು ನೋಡಿ ಅಲ್ಲದೇ ನಿರೀಕ್ಷಿತ ಬಿಡ್‌ದಾರರು ಅಧಿಕೃತ ಅಧಿಕಾರಿ ಮೊಬೈಲ್ ಸಂಖ್ಯೆ 9035543300ಗೂ ಸಹ ಕರೆ ಮಾಡಬಹುದು.
ದಿನಾಂಕ:19.10.2026
ಸ್ಥಳ:ಹುಬ್ಬಳ್ಳಿ
ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

21 ನೇ ಪುಣ್ಯಸ್ಮರಣೆ



ಶ್ರೀ ಗಣಪತಸಾ ನಾರಾಯಣಸಾ ಧರ್ಮದಾಸ
ಇವರು ನಮ್ಮನ್ನಗಲಿ ಇಂದಿಗೆ ದಿ : 21-10-2026ಕ್ಕೆ 21 ವರ್ಷಗಳಾದವು.
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ :
ದುಃಖತಪ್ತ ಮಕ್ಕಳಾದ : ತುಳಸಿದಾಸ ಗಣಪತಸಾ ಧರ್ಮದಾಸ, ಪ್ರೇಮನಾಥಸಾ ಗಣಪತಸಾ ಧರ್ಮದಾಸ,
ಮಗಳು : ಶ್ರೀಮತಿ ಶಶಿಕಲಾ ಸಿ. ಹಬೀಬ
ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗದವರು
ಹೊಟೇಲ್ ಶೃಂಗಾರ ಪ್ಯಾಲೆಸ್, ಸ್ಟೇಷನ್ ರಸ್ತೆ, ಹುಬ್ಬಳ್ಳಿ
ಶೃಂಗಾರ ವೈನ್ಸ್ ಮತ್ತು ಬಾರ, ಸ್ಟೇಷನ್ ರಸ್ತೆ, ಹುಬ್ಬಳ್ಳಿ
ಶೃಂಗಾರ ಬಾರ, ವಿದ್ಯಾಗಿರಿ, ಧಾರವಾಡ ಮೊ : 9980061900

CMYK